ಕ್ರಿಯಾಯೋಜನೆ ಅನುಮೋದನೆಗಾಗಿ ಮರುಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿರುತ್ತದೆ.

ಪಟ್ಟಣದ ವ್ಯಾಪ್ತಿಯಲ್ಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುತ್ತಿದ್ದು, ತಾಂತ್ರಿಕ ವಿಭಾಗದ ಪರಿಶೀಲನೆ ಮತ್ತು 3ನೇ ವ್ಯಕ್ತಿ ತಪಾಸಣೆಯ ವರದಿಯನ್ನು ಪಡೆದ ನಂತರ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿಸಲಾಗುತ್ತಿದೆ.

ವಿವಿಧ ವಸತಿ ಯೋಜನೆಗಳಲ್ಲಿ ಮಂಜೂರಾದ ಮನೆಗಳು

751(1342) ಶ್ರೀ ಅಮರೇಶ್:(ಮುಳಬಾಗಿಲು) ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಆಶ್ರಯ, ಅಂಬೇಡ್ಕರ್, ದೇವದಾಸಿ ಮತ್ತಿತರ ವಸತಿ ಯೋಜನೆಯಲ್ಲಿ ಮಂಜೂರಾದ ಮನೆಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು);

ಆ) ಯಾವ ಯಾವ ವತಿ ಯೋಜನೆಯಲ್ಲಿ ಎಷ್ಟೆಷ್ಟು ಮನೆಗಳು ಪೂರ್ಣಗೊಂಡಿವೆ ಹಾಗೂ ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲಾಗಿದೆ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಇ) ಈ ಯೋಜನೆಗಳಲ್ಲಿನ ಮನೆಗಳ ನಿರ್ಮಾಣಕ್ಕೆ ಸರ್ಕಾರವು ಈವರೆಗೂ ಬಿಡುಗಡೆ ಮಾಡಲಾದ ಅನುದಾನವೆಷ್ಟು;

ಈ) ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು(ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಆಶ್ರಯ, ಅಂಬೇಡ್ಕರ್ ದೇವದಾಸಿ ಮತ್ತಿತರ ವಸತಿ ಯೋಜನೆಯಲ್ಲಿ ಮಂಜೂರು ಮಾಡಿರುವ ಮನೆಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಯೋಜನೆ	ಸಾಲು	ಮಂಜೂರಾದ ಮನೆಗಳು
1	ಗ್ರಾಮೀಣ ಅಶ್ರಯ	2007–08	ಸರ್ಕಾರದಿಂದ ಗುರಿ ನಿಗದಿ ಪಡಿಸಿರುವುದಿಲ್ಲ
		2008–09	200000
		2009–10	ಸರ್ಕಾರದಿಂದ ಗುರಿ ನಿಗದಿ ಪಡಿಸಿರುವುದಿಲ್ಲ
2	ಗ್ರಾಮೀಣ ಅಂಬೇಡ್ಕರ್	2007–08	18333
		2008–09	15871
		2009–10	10000
3	ನಗರ ಆಶ್ರಯ	2007–08	ಸರ್ಕಾರದಿಂದ ಗುರಿ ನಿಗದಿ ಪಡಿಸಿರುವುದಿಲ್ಲ
		2008–09	ಸರ್ಕಾರದಿಂದ ಗುರಿ ನಿಗದಿ ಪಡಿಸಿರುವುದಿಲ್ಲ
		2009–10	ಸರ್ಕಾರದಿಂದ ಗುರಿ ನಿಗದಿ ಪಡಿಸಿರುವುದಿಲ್ಲ
4	ಇಂದಿರಾ ಆವಾಸ್ ಯೋಜನೆ	2007–08	74029
		2008–09	137845
		2009–10	79489
5	ದೇವದಾಸಿ	2007–	ಸರ್ಕಾರದಿಂದ ಗುರಿ ನಿಗದಿ

	ದೇವದಾಸಿ ಗ್ರಾಮೀಣ	08	ಪಡಿಸಿರುವುದಿಲ್ಲ
		2008–09	ಸರ್ಕಾರದಿಂದ ಗುರಿ ನಿಗದಿ ಪಡಿಸಿರುವುದಿಲ್ಲ
		2009–10	2243
6	ದೇವದಾಸಿ ನಗರ	2009–10	257
	ಒಟು		538067

ಕಳೆದ ಮೂರು ವರ್ಷಗಳಲ್ಲಿ ಆಶ್ರಯ, ಅಂಬೇಡ್ಕರ್, ದೇವದಾಸಿ ಮತ್ತಿತರ ವಸತಿ ಯೋಜನೆಗಳಲ್ಲಿ ಮಂಜೂರು ಮಾಡಿರುವ ಮನೆಗಳು ತಾಲ್ಲೂಕುವಾರು ವಿವರವನ್ನು ಅನುಬಂಧ ' ಅ ' ದಲ್ಲಿ ಲಗತ್ತಿಸಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಲ್ಲಿ ಪೂರ್ಣಗೊಂಡ ಹಾಗೂ ವಿತರಿಸಲಾದ ಮನೆಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಯೋಜನೆ	ಸಾಲು	ಪೂರ್ಣಗೊಂಡ ಮನೆಗಳು *	ವಿತರಿಸಲಾದ ಮನೆಗಳು
1	ಗ್ರಾಮೀಣ ಆಶ್ರಯ	2007–08	227858	227858
		2008–09	192858	192858
		2009–10	157217	157217
2	ಗ್ರಾಮೀಣ ಅಂಬೇಡ್ಕರ್	2007–08	11628	11628
		2008–09	13430	13430
		2009–10	15876	15876
3	ನಗರ ಆಶ್ರಯ	2007–08	1452	1452
		2008–09	2317	2317
		2009–10	4135	4135
4	ಇಂದಿರಾ ಆವಾಸ್ ಯೋಜನೆ	2007–08	39656	39656
		2008–09	85459	85459
		2009–10	155744	155744
5	ದೇವದಾಸಿ	2007–08	0	0

	ಗ್ರಾಮೀಣ	2008–09	0	0
		2009–10	1	1
6	ದೇವದಾಸಿ ನಗರ	2009–10	7	7
	ಒಟ್ಟು		907638	907638

ಪೂರ್ಣಗೊಂಡ ಮನೆಗಳಲ್ಲಿ ಹಿಂದಿನ ಶ್ರೇಣಿಯಲ್ಲಿ ಬಾಕಿ ಇದ್ದ ಮನೆಗಳು ಸಹ ಸೇರಿರುತ್ತವೆ ತಾಲ್ಲೂಕುವಾರು ವಿವರ ಅನುಬಂಧ "ಆ"ದಲ್ಲಿ ಲಗತ್ತಿಸಿದೆ.

ಇ) ಸರಕಾರವು ಈ ಮೇಲೆ ತಿಳಿಸಲಾದ ವಸತಿ ಯೋಜನೆಗಳಿಗಾಗಿ ಮನೆಗಳ ನಿರ್ಮಾಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ರೂ.182470.56 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ವರ್ಷವಾರು ಮತ್ತು ಯೋಜನಾವಾರು ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಯೋಜನೆ	ಆರ್ಥಿಕ ವರ್ಷ (ರೂ. ಲಕ್ಷಗಳಲ್ಲಿ)			
		2007–08	**2008–09**	**2009–10**	ಒಟ್ಟು
1	ಗ್ರಾಮೀಣ ಆಶ್ರಯ	53590.40	51958.03	34801.12	140349.55
2	ಗ್ರಾಮೀಣ ಅಂಬೇಡ್ಕರ್	4847.40	6348.52	1625.00	12820.92
3	ನಗರ ಆಶ್ರಯ	0.00	0.00	0.00	0.00
4	ಇಂದಿರಾ ಆವಾಸ್ ಯೋಜನೆ	4626.62	10103.66	14319.69	29049.97
5	ದೇವದಾಸಿ	0.00	0.00	250.00	250.00

	ಒಟ್ಟು	63064.42	68410.21	50995.81	182470.44

ಈ) ಸರ್ಕಾರವು ಹಿಂದಿನ ಸಾಲಿನ ಶ್ರೇಣಿಯ ಮನೆಗಳನ್ನು ಪೂರ್ಣಗೊಳಿಸಲು ಇನ್ನು ರೂ.62182.13ಲಕ್ಷಗಳ ಅನುದಾನವನ್ನು ಒದಗಿಸಬೇಕಾಗಿದ್ದು, ಇದರಲ್ಲಿ ಪ್ರಸ್ತುತ ವರ್ಷ ಅಂದರೆ 2010–11 ರಲ್ಲಿ ರೂ.28027.25 ಲಕ್ಷಗಳನ್ನು ಒದಗಿಸಿದ್ದು, ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು.

ಶೀಘ್ರಲಿಪಿಗಾರರ ಹುದ್ದೆ ಭರ್ತಿ ಮಾಡುವುದು

754(1295) ಶ್ರೀ ಅಪ್ಪಚ್ಚು ರಂಜನ್ ಎಂ ಪಿ:(ವಿಧಾನಸಭಾ ಸದಸ್ಯರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು ಶೀಘ್ರಲಿಪಿಗಾರರ ಹುದ್ದೆಗಳೆಷ್ಟು; ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಶೀಘ್ರಲಿಪಿಗಾರರ ಹುದ್ದೆಗೆ ಆಯ್ಕೆ ಮಾಡುವಾಗ ಅನುಸರಿಸುವ ಮಾನದಂಡಗಳೇನು; ಹಾಗೂ ಶೀಘ್ರಲಿಪಿಗಾರರ ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತೆಗಳು ಏನು?

ಶ್ರೀ ಬಿ ಎಸ್ ಯಡಿಯೂರಪ್ಪ:(ಮುಖ್ಯಮಂತ್ರಿಗಳು)

ಅ) 50. ಸಚಿವಾಲಯದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಮೆರಿಟ್ ಹಾಗೂ ಮೀಸಲಾತಿಯ ಮಾನದಂಡದ ಆಧಾರದ ಮೇಲೆ ನೇಮಕಾತಿ ಮಾಡಲಾಗುತ್ತದೆ. ಶೀಘ್ರಲಿಪಿಗಾರರ ಹುದ್ದೆಗೆ ಆಯ್ಕೆಯಾಗುವ ಅಭ್ಯರ್ಥಿಗಳನ್ನು ಕರ್ನಾಟಕ ನಾಗರಿಕ ಸೇವೆಗಳು (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು 1983 ರನ್ವಯ ಈ ಕೆಳಕಂಡ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ.;

1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.